ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಅದು ಹತ್ತು ಹದಿನೈದು ವರ್ಷಗಳಿಂದ ಪೆಂಡಿಂಗ್ ಇದ್ದಂಥ ಕೆಲಸ. ನಾನು ಬಂದ ತಕ್ಷಣ ದಾವಣಗೆರೆಗೆ ಹೋಗಿ ಇನ್‌ಸ್ಪೆಕ್ಷನ್ ಮಾಡಿ ಹದಿನೈದು ದಿವಸಗಳೊಳಗಾಗಿ ಅದಕ್ಕೆ ಸ್ಯಾಂಕ್ಷನ್ ಕೊಟ್ಟಿದ್ದೇನೆ. ಅದಕ್ಕೆ ಸುಮಾರು ಒಂದೂವರೆ ಕೋಟಿ ರೂಪಾಯಿಯ ಬಡ್ಜೆಟ್ ಇಟ್ಟು90ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇನೆ. ಅದು ಮುಗಿಯಲಿಕ್ಕೆ ಇನ್ನು ಐದಾರು ತಿಂಗಳಾದರು ಬೇಕಾಗುತ್ತದೆ. ಇನ್ನು ನಮ್ಮ ಸರ್ಕಾರದ ಅವಧಿ ಇನ್ನು ಹದಿನೆಂಟು ತಿಂಗಳು ಇದೆ. ಅಷ್ಟರೊಳಗೆ ಅದನ್ನು ಮುಗಿಸುತ್ತೇವೆ. ಮಾನ್ಯ ಸದಸ್ಯರಿಗೆ ಅದರ ಬಗ್ಗೆ ಚಿಂತೆ ಬೇಡ.

ಅಧ್ಯಕ್ಷರು : ರೇವುನಾಯಕ್ ಬೆಳಮಗಿ, ನಿಮ್ಮ ಪ್ರಶ್ನೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಕೇಳಿದ್ದೀರಿ ಆದರೆ ಅದು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾವಣೆ ಆಗಿದೆ. ಸಮಾಜ ಕಲ್ಯಾಣ ಮಂತ್ರಿಗಳ ಬಿಸನೆಸ್ ಇದ್ದ ದಿವಸ ಅದರ ಉತ್ತರವನ್ನು ತರಿಸುತ್ತೇನೆ.

ಕೃಷಿ ಅಭಿವೃದ್ಧಿ ಯೋಜನೆಗಳಿಗೆ ಹಣಕಾಸಿನ ನೆರವು

143 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ರಾಜ್ಯದ ಕೃಷಿ ಅಭಿವೃದ್ಧಿ ಯೋಜನೆಗಳಿಗೆ ಹುಡ್ಕೋ ಹಣಕಾಸಿನ ನೆರವು ನೀಡಲು ಮುಂದೆ ಬಂದಿದೆಯೇ ?*

ಆ) *ಹಾಗಿದ್ದಲ್ಲಿ ಯಾವ ಯಾವ ಕೃಷಿ ಅಭಿವೃದ್ಧಿ ಯೋಜನೆಗಳಿಗೆ ಹುಡ್ಕೋ ಸಾಲದ ನೆರವು ನೀಡಲು ಉದ್ದೇಶಿಸಿದೆ.*

ಇ) *ಈ ಯೋಜನೆಗಳಿಗೆ ನೀಡಲಿರುವ ಒಟ್ಟು ಹಣಕಾಸಿನ ನೆರವೆಷ್ಟು ?*

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) :

ಅ) ಇಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೆ, ಈ ಸಮಯವನ್ನು ಉಪಯೋಗಿಸಿಕೊಂಡು ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ನಮ್ಮ ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆ ಕೃಷಿ ಇಲಾಖೆಯಲ್ಲಿ ಬಹಳಷ್ಟು ಕೊಡುಗೆಯನ್ನು ಕೊಟ್ಟಿದೆ. ಹತ್ತಿ ಮತ್ತು ನೆಲ್ಲು ಬೆಳೆಯುವುದರಲ್ಲಿ ಅವು ಎರಡು ಪ್ರಸಿದ್ಧವಾದ ಜಿಲ್ಲೆಗಳು. ಇವೊತ್ತು ನಿಮ್ಮ ಉತ್ತರದಲ್ಲಿ ಯಾವ ತರಹ ನೀವು ಸ್ಕೀಮಗಳನ್ನು ತೆಗೆದುಕೊಂಡಿದ್ದೀರಿ ಎಂದು ಹೇಳಿದ್ದೀರಿ. ಕಳೆದ ಐದಾರೆಂಟು ವರ್ಷಗಳಿಂದ ಕೃಷಿ ಇಲಾಖೆಯಲ್ಲಿ ಸ್ಟ್ಯಾಗ್ನೇಟ್ ಆಗಿದೆ. ಅಲ್ಲಿ ಯಾವುದೇ ತರಹದ ಯೋಜನೆಗಳು ಬಂದಿಲ್ಲ. ಇವೊತ್ತು ನನ್ನ ಕ್ಷೇತ್ರದಲ್ಲಿ ಹೊಸದಾಗಿ ನೆಲ್ಲು ಹಾಕಿದ್ದಾರೆ.

ಅವರು ಯಾವುದೋ ಒಂದು ಹೊಸ ತರಹ ಬೆಳೆಯುತ್ತಿದ್ದಾರೆ. I know it is not relevent to the question I have asked. But I am taking the advantage of the situation. ಇವೊತ್ತು ನಮ್ಮ ಜಿಲ್ಲೆಯಲ್ಲಿ ಹೊಸ ತರಹ ನೆಲ್ಲು ಬೆಳೆಸಿದ್ದಾರೆ. ಅದಕ್ಕೆ ಮೂವತ್ತು ದಿವಸ ಆದ ಮೇಲೆ ತೆನೆ ಬಿಟ್ಟಿದೆ. ನಾರ್ಮಲ್ಲಾಗಿ ಮೊಚ್ಯೂರಿಟಿ ಆಗಿ 120-130 ದಿವಸ ಆದಮೇಲೆ ಅದು ತೆನೆ ಬಿಡುತ್ತಾದೆ. ಅದಕ್ಕೆ ಏನು ಕಾರಣ ಎಂದು ನಮಗೆ ಗೊತ್ತಿಲ್ಲ ತಮಗೆ ಗೊತ್ತಿದೆ ಬಳ್ಳಾರಿ ಜಿಲ್ಲೆಯಲ್ಲಿ ಹತ್ತಿ ಕೂಡ ಬಹಳಷ್ಟು ಬೆಳೆಯುತ್ತೇವೆ. ಆದರೆ ವರ್ಷೇ ವರ್ಷೇ ಹೊಸ ಹೊಸ ರೋಗಗಳು ಬರುತ್ತವೆ. ಅಲ್ಲಿ ಬಹಳ ವರ್ಷಗಳಿಂದ ಹತ್ತಿಗೆ ಮತ್ತು ನೆಲ್ಲಿಗೆ ಒಂದು ರಿಸರ್ಚ್ ಸೆಂಟರ್ ಓಪನ್ ಮಾಡಬೇಕೆಂದು ಕೇಳುತ್ತಿದ್ದೇವೆ. ಆದಕಾರಣ ಅದರ ಬಗ್ಗೆ ಮಾನ್ಯ ಕೃಷಿ ಸಚಿವರು ಸರಿಯಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ನನ್ನ ಹತ್ತಿರ ಸಿದ್ದವಾಗಿರತಕ್ಕ ಉತ್ತರವಿಲ್ಲ. ಆದರೂ ಅವರ ಉದ್ದೇಶವೇನಿದೆ, ಅಲ್ಲಿ ಅವಶ್ಯಕತೆ ಏನಿದೆ ಎಂಬ ಬಗ್ಗೆ ನಾನು ಗಣನೆಗೆ ತೆಗೆದುಕೊಂಡಿದ್ದೇನೆ.

ಮಂಗಳೂರು ಕ್ಷೇತ್ರದಲ್ಲಿನ ಕೊಳಚೆ ಪ್ರದೇಶಗಳ ನಿರ್ಮೂಲನ

144- ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಂಗಳೂರು ಕ್ಷೇತ್ರದಲ್ಲಿ ಕೊಳಚೆ ನಿರ್ಮೂಲನಕ್ಕೆ ಸರ್ಕಾರದವರು ಹಾಕಿಕೊಂಡಿರುವ ಕಾರ್ಯಕ್ರಮಗಳೇನು?*

ಆ) *1997-98ರಲ್ಲಿ ಖರ್ಚು ಮಾಡಿದ ಹಣ ಎಷ್ಟು? 1998-99 ಎಷ್ಟು ಅಭಿವೃದ್ಧಿ ಯೋಜನೆಯನ್ನು (ಕೊಳಚೆ ಪ್ರದೇಶದಲ್ಲಿ) ರಾಜ್ಯದಲ್ಲಿ ಹಾಗೂ ಮಂಗಳೂರು ಕ್ಷೇತ್ರದಲ್ಲಿ ಸರ್ಕಾರವು ಹಮ್ಮಿಕೊಂಡಿದೆ? (ವಿವರ ನೀಡುವುದು)*

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) 1997-98ನೇ ಸಾಲಿನಲ್ಲಿ ರಾಷ್ಟ್ರೀಯ ಕೊಳಚೆ ಪ್ರದೇಶ ಅಭಿವೃದ್ಧಿಯೋಜನೆಯಡಿ 6.75 ಲಕ್ಷ ರೂ.ಗಳ ವೆಚ್ಚದಲ್ಲಿ ಮಂಗಳೂರು ಕ್ಷೇತ್ರದ ದೊಂಗರಕೇರಿ ಕೊಳಚೆ ಪ್ರದೇಶದಲ್ಲಿನ 18 ಮನೆಗಳ ದುರಸ್ಥಿ ಕಿರುನೀರು ಸರಬರಾಜು ಸಾರ್ವಜನಿಕ ಶೌಚಾಲಯ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲು ತೀರ್ಮಾನಿಸಲಾಗಿದೆ. ಈ ಕಾಮಗಾರಿಗೆ 4 ಬಾರಿ ಟೆಂಡರ್ ಕರೆದರೂ ಕೂಡ ಗುತ್ತಿಗೆದಾರರಿಂದ ಪ್ರತಿಕ್ರಿಯೆ ದೊರೆತಿಲ್ಲದ ಕಾರಣ ಇಲಾಖಾವತಿಯಿಂದ ಕಾಮಗಾರಿಯನ್ನು ಕೈಗೊಳ್ಳಲು ಯೋಜಿಸಲಾಗಿದೆ.

ಈಗಾಗಲೇ ಮಂಗಳೂರು ನಗರದ ಕೆಳಕಂಡ 8 ಪೋಷಿತ ಕೊಳಚೆ ಪ್ರದೇಶಗಳಲ್ಲಿ ರೂ. 6.19 ಲಕ್ಷ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದ್ದು ವಿವರ ಕೆಳಗೆ ಕೊಡಲಾಗಿದೆ.